ವಿಷಯ: M/s Vish Wind Infrastruckture LLP ಕಂಪನಿಯವರಿಗೆ ಧಾರವಾಡ ಮತ್ತು ಗದಗ ಜಿಲ್ಲೆಗಳ ನವಲಗುಂದ ಮತ್ತು ಗದಗ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 4.8 ಮೆ.ವ್ಯಾ ಸಾಮರ್ಥ್ಯವನ್ನು M/s ReNew Vayu Energy Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 122.10 ಮೆ.ವ್ಯಾ. ಹೆಚ್ಚಿಸುವ ಕುರಿತು.

331
05/01/22

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಇಎನ್ 95 ಎನ್‌ಸಿಇ 2018, ದಿನಾಂಕ:23.03.2018
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ: KREDL/08/RVEPL-122.10 MW/VWILLP-4.8MW/Dharwad/F-51(2021) 40 ದಿನಾಂಕ: 06.01.2022

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದನ್ವಯ M/s Vish Wind Infrastruckture LLP ರವರಿಗೆ ಧಾರವಾಡ ಮತ್ತು ಗದಗ ಜಿಲ್ಲೆಗಳ, ನವಲಗುಂದ ಮತ್ತು ಗದಗ ತಾಲ್ಲೂಕುಗಳ ಸಾಸವಿಹಳ್ಳಿ, ಕೊಂಡಿಕೊಪ್ಪ ಮತ್ತು ಅಣ್ಣಿಗೇರಿ ಗ್ರಾಮಗಳಲ್ಲಿ 4.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೇಲಿನ ಆದೇಶದನ್ವಯ M/s Vish Wind Infrastruckture LLP ಕಂಪನಿಯವರಿಗೆ ಧಾರವಾಡ ಮತ್ತು ಗದಗ ಜಿಲ್ಲೆಗಳ ನವಲಗುಂದ ಮತ್ತು ಗದಗ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 4.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s ReNew Vayu Energy Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 122.10 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಮತ್ತು ಮೂಲ ಆದೇಶದಲ್ಲಿನ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತಿಗೆ ಸಂಬಂಧಿಸಿದಂತೆ ನಮೂದಿಸಿರುವ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡುವ ಬದಲಾಗಿ, ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ವರ್ಗದ ಮುಖಾಂತರ ವಿದ್ಯುತ್ ಸರಬರಾಜು ಮಾಡಲು ಹಂಚಿಕೆ ಆದೇಶ ನೀಡುವಂತೆ ಕೋರಿ ವಿಸ್ತೃತ ಯೋಜನಾ ವರದಿ (DPR) ಯನ್ನು ಸಲ್ಲಿಸಿರುವುದಾಗಿ ಹಾಗೂ ಸದರಿ ವರ್ಗಾವಣೆಗೆ ಎರಡೂ ಕಂಪನಿಯವರು ಸಹಮತಿಯನ್ನು ನೀಡಿರುವುದಾಗಿ ಈ ಸಂಬಂಧ ಕ್ರೆಡಲ್ ರವರು 4.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ವರ್ಗಾವಣೆಗಾಗಿ ವರ್ಗಾವಣೆ ಶುಲ್ಕ ಹಾಗೂ ಸಾಮರ್ಥ್ಯ ಹೆಚ್ಚಳದ ಅರ್ಜಿ ಮತ್ತು ಡಿಪಿಆರ್ ಶುಲ್ಕಗಳನ್ನು ಪಾವತಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s ReNew Vayu Energy Private Limited ಕಂಪನಿಯು ದಿನಾಂಕ:11.11.2020ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ನವದೆಹಲಿಯಲ್ಲಿ ಸ್ಥಾಪಿತಗೊಂಡಿದೆ. ಸದರಿ ಕಂಪನಿಯು M/s Renew Power Private Limited ರವರಿಂದ ಸ್ಥಾಪಿಸಲ್ಪಟ್ಟ SPV ಕಂಪನಿಯಾಗಿರುತ್ತದೆ. M/s Renew Power Private Limited ರವರು ನಿಗದಿತ ನೆಟ್‌ವರ್ತ್ ಹೊಂದಿರುವುದಾಗಿ ಕ್ರೆಡಲ್ ರವರು ತಿಳಿಸಿರುತ್ತಾರೆ. M/s ReNew Vayu Energy Private Limited ರವರಿಗೆ ಟೋಪೋಶೀಟ್ ಸಂಖ್ಯೆ:48M/7ರಲ್ಲಿ ನೀಡಿರುವ ಅಕ್ಷಾಂಶ ಮತ್ತು ರೇಖಾಂಶಗಳ

…2

8/2/22
AGM(W)

Wind Section
Inward No. 105
Date 8/2/2022
Sig

ಸ್ಥಳದಲ್ಲಿ, ಸದರಿಯವರು 37 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ ಒಟ್ಟು 148 ಎಕರೆ (37 Nos of WTG X 4 Acre = 148 acres) ಖಾಸಗಿ ಜಮೀನನ್ನು ಮಾತ್ರ ಉಪಯೋಗಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ಸದರಿ ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 38 ಎನ್ ಸಿಇ 2022**
**ಬೆಂಗಳೂರು ದಿನಾಂಕ:02.02.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Vish Wind Infrastruckture LLP ಕಂಪನಿಯವರಿಗೆ ಧಾರವಾಡ ಮತ್ತು ಗದಗ ಜಿಲ್ಲೆಗಳ ನವಲಗುಂದ ಮತ್ತು ಗದಗ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 4.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s ReNew Vayu Energy Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 4.8 ಮೆ.ವ್ಯಾ ನಿಂದ 122.10 ಮೆ.ವ್ಯಾ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ಹೆಚ್ಚಿಸಿ ಆದೇಶಿಸಿದೆ.

**Geographical area description for 122.10 MW capacity wind power project of M/s ReNew Vayu Energy Private Limited**

| Sl. No. | Geographical area description of the project | Near by villages of the proposed area & District | Existing (Transfer) capacity in MW | Capacity enhancement in MW | Total capacity in MW |
|---|---|---|---|---|---|
| 1 | The proposed area is surrounded by points A, B, C, D, E, F and are held in the following Geographical co-ordinates as:<br>**Point A:**Lat:15°26’36.78”N,Long:75°25’0’’E<br>**Point B:**Lat:15°28’27.84”N,Long:75°25’0’’E<br>**Point C**:Lat:15°28’27.33”N,Long:75°25’51.85’’E<br>**Point D**:Lat:15°30’0”N, Long:75°26’35.34’’E<br>**Point E:**Lat:15°30’0”N,Long:75°30’0’’E<br>**Point F:**Lat:15°26’1.03”N,Long:75°30’0’’E<br>**Peaks:** 623, 620, 599, 608, 602, 593 and 605m Amsl<br>**Toposheet No:** 48 M/7 | Sasavihalli, Kondikoppa and Annigeri Villages of **Navalgunda and Gadag Taluks of Dharwad and Gadag Districts.** | 4.8 MW | 117.30 MW | 122.10 MW (37 Nos x 3300 kW) |